**039/2018-K**

Maximum : 100 marks

Time : 1 hour and 15 minutes

1. ಕೇರಳದ ಪ್ರಸಕ್ತ ಆಂತರಿಕ ವ್ಯವಹಾರಗಳ ಸಚಿವರು ಯಾರು?
   (A) ವಿ.ಎಸ್. ಅಚ್ಯುತಾನಂದನ್
   (B) ಪಿಣರಾಯಿ ವಿಜಯನ್
   (C) ಕನ್ನಪ್ಪಳ್ಳಿ ರಾಮಚಂದ್ರನ್
   (D) ವಿ.ಎಸ್. ಸುನಿಲ್ ಕುಮಾರ್

2. ಭಾರತದ ಮೊಟ್ಟಮೊದಲ ಮಂಗಳ ಅಭಿಯಾನವನ್ನು ಏನೆಂದು ಹೆಸರಿಸಲಾಗಿದೆ?
   (A) ಚಂದ್ರಯಾನ್
   (B) ಚೆವ್ವಾ–2013
   (C) ಮಂಗಳ್‌ಯಾನ್
   (D) ದೀಪ್ ಇಂಪ್ಯಾಕ್ಟ್

3. ವಿಶ್ವ ಮಾತೃಭಾಷಾ ದಿನ :
   (A) ಫೆಬ್ರವರಿ 21
   (B) ಮಾರ್ಚ್ 23
   (C) ಏಪ್ರಿಲ್ 7
   (D) ಜನವರಿ 9

4. 2016 ರಲ್ಲಿ ವಯಲಾರ್ ಪುರಸ್ಕಾರವನ್ನು ಗಳಿಸಿದವರು :
   (A) ಶ್ರೀಕುಮರನ್ ತಂಬಿ
   (B) ಸಿ. ರಾಧಾಕೃಷ್ಣನ್
   (C) ಬಿ. ಮುರಳಿ
   (D) ವಿ.ಕೆ. ಕುಮರನ್

5. ಕೇರಳ ಸರಕಾರದ ಮುಂದಾಳುತ್ವದಲ್ಲಿ, ಯಾವ ಸ್ಥಳದಲ್ಲಿ ಎಂ.ಟಿ. ವಾಸುದೇವನ್ ನಾಯರ್‌ರವರ ಮ್ಯೂಸಿಯಂನ್ನು ನಿರ್ಮಿಸಲಾಗಿದೆ?
   (A) ತಿರುವನಂತಪುರಂ
   (B) ಕೊಚ್ಚಿ
   (C) ಕೋಜಿಕ್ಕೋಡ್
   (D) ಕಣ್ಣೂರು

6. ಭಾರತದಲ್ಲಿ ಅತ್ಯಂತ ಕಡಿಮೆ ನಿರುದ್ಯೋಗಿಗಳನ್ನು ಹೊಂದಿರುವ ರಾಜ್ಯ :
   (A) ಕೇರಳ
   (B) ಗುಜರಾತ್
   (C) ಪಂಜಾಬ್
   (D) ಪಶ್ಚಿಮ ಬಂಗಾಳ

7. ಕೇರಳ ಉಚ್ಚ ನ್ಯಾಯಾಲಯದ ಈಗಿನ ಮುಖ್ಯ ನ್ಯಾಯಾಧೀಶರು ಯಾರು?
   (A) ಅಶೋಕ್ ಭೂಷಣ್
   (B) ನವನೀತ್ ಪ್ರಸಾದ್ ಸಿಂಗ್
   (C) ವಿ.ಎಸ್. ಠಾಕೂರ್
   (D) ಸಂತಾನ ಗೌಡರ್ ಮೋಹನ್

8. "ಕುಟುಂಬಶ್ರೀ" ಮೂಲಕ ಕೇರಳದಲ್ಲಿ ಆರ್ಗಾನಿಕ್ ಕೃಷಿಯನ್ನು ಅಭಿವೃದ್ಧಿಗೊಳಿಸಲು ಕೇರಳ ಸರಕಾರವು ಕಾರ್ಯಗತಗೊಳಿಸಿದ ಯೋಜನೆ :

(A) ಪೊಲಿವ್
(B) ನೀರವ್
(C) ಜೀವನಂ
(D) ಸುರಭಿ

9. ಮ್ಯಾಂಗ್ರೋವ್ ಕಾಡುಗಳನ್ನು ರಕ್ಷಿತ ಅರಣ್ಯಗಳನ್ನಾಗಿ ಪರಿವರ್ತಿಸಿದ ಭಾರತದ ಮೊದಲ ರಾಜ್ಯ :

(A) ಕೇರಳ
(B) ಮಹಾರಾಷ್ಟ್ರ
(C) ತಮಿಳುನಾಡು
(D) ಗುಜರಾತ್

10. ರಸ್ತೆ ಅಪಘಾತಗಳನ್ನು ಕಡಿಮೆ ಮಾಡುವುದಕ್ಕಾಗಿ ಕೈಗೊಂಡ "ಶುಭಯಾತ್ರೆ–2015" ಎನ್ನುವ ಅಭಿಯಾನದ ಬ್ರಾಂಡ್ ಅಂಬಾಸಿಡರ್ ಯಾರು?

(A) ದಿಲೀಪ್
(B) ಮಮ್ಮುಟ್ಟಿ
(C) ಮಂಜುವಾರಿಯಾರ್
(D) ಮೋಹನ್‌ಲಾಲ್

11. ಇವುಗಳಲ್ಲಿ ಭಾರತದ ಉತ್ತರಭಾಗದ ದಿಕ್ಕಿಗೆ ಇರುವ ಪರ್ವತ ಶ್ರೇಣಿ ಯಾವುದು?

(A) ಹಿಮಾಚಲ್
(B) ಶಿವಾಲಿಕ್
(C) ಹಿಮಾದ್ರಿ
(D) ಅರಾವಳಿ

12. ಭಾರತದ ಎರಡನೇ ಅತಿದೊಡ್ಡ ರಾಜ್ಯ ಯಾವುದು?

(A) ಮಹಾರಾಷ್ಟ್ರ
(B) ರಾಜಸ್ಥಾನ
(C) ಜಮ್ಮು–ಕಾಶ್ಮೀರ
(D) ಮಧ್ಯಪ್ರದೇಶ

13. ದುರ್ಗಾಪುರ್‌ನಲ್ಲಿರುವ ಕಬ್ಬಿಣ ಕಾರ್ಖಾನೆಯ ನಿರ್ಮಾಣಕ್ಕೆ ವಿತ್ತೀಯ ಸಹಾಯ ನೀಡಿದ ರಾಷ್ಟ್ರ :

(A) ಜರ್ಮನಿ
(B) ರಷ್ಯಾ
(C) ಅಮೆರಿಕಾ
(D) ಬ್ರಿಟನ್

14. ಇವುಗಳಲ್ಲಿ ಇನ್ನೊಂದು ರಾಜ್ಯದೊಂದಿಗೆ ತನ್ನ ಗಡಿಯನ್ನು ಹಂಚಿಕೊಂಡಿರುವ ಭಾರತದ ರಾಜ್ಯ ಯಾವುದು?

(A) ಮೇಘಾಲಯ
(B) ಹಿಮಾಚಲಪ್ರದೇಶ
(C) ಒಡಿಶಾ
(D) ತ್ರಿಪುರ

15. ಭಾರತದಲ್ಲಿರುವ ಅತ್ಯಂತ ದೊಡ್ಡ ಜೈವಿಕಾರಣ್ಯ ಯಾವುದು?

(A) ನೀಲಗಿರಿ
(B) ಸುಂದರಬನ್
(C) ಅಗಸ್ತ್ಯರ್‌ಕೂಡಂ
(D) ಗ್ರೇಟ್ ರಾನ್ ಆಫ್ ಕಚ್

16. ದಕ್ಷಿಣ ಭಾರತದ ಅತ್ಯಂತ ಎತ್ತರದ ಶಿಖರ :
(A) ಅಗಸ್ತ್ಯರ್‌ಕೂಡಂ
(B) ತೇನ್‌ಮಲೈ
(C) ಆನೆಮುಡಿ
(D) ಕಾಂಚನಗಂಗಾ

17. ಅತ್ಯಧಿಕ ಸಂಖ್ಯೆಯ ವಾರ್ತಾಪತ್ರಿಕೆಯನ್ನು ಪ್ರಕಾಶಿಸುವ ಭಾರತದ ರಾಜ್ಯ :
(A) ಮಧ್ಯಪ್ರದೇಶ
(B) ಮಹಾರಾಷ್ಟ್ರ
(C) ಉತ್ತರಪ್ರದೇಶ
(D) ಕೇರಳ

18. ಭಾರತದ ಆರ್ಥಿಕ ನೀತಿಯಲ್ಲಿ ಈಗ ಇರುವ ಆರ್ಥಿಕ ನೀತಿ ಯಾವ ಪ್ರಕಾರದ್ದು?
(A) ಬಂಡವಾಳಶಾಹಿ
(B) ಸಮಾಜಶಾಹಿ
(C) ಮಿಶ್ರ ಆರ್ಥಿಕ ನೀತಿ
(D) ಬಿಸಿನೆಸ್ ಫಿನಾನ್ಶಿಯಲ್ ಮಾರ್ಕೆಟ್ ಪಾಲಿಸಿ

19. ತೆಲಂಗಾಣ ರಾಜ್ಯದ ರಾಜಧಾನಿ ಯಾವುದು?
(A) ಕರ್ನೂಲ್
(B) ಹೈದರಾಬಾದ್
(C) ಸಿಕಂದರಾಬಾದ್
(D) ವಿಶಾಖಪಟ್ಟಣಂ

20. ತಮಿಳುನಾಡಿನ ರಾಜಪಕ್ಷಿ ಯಾವುದು?
(A) ಪಾರಿವಾಳ
(B) ನವಿಲು
(C) ಹಾರ್ನ್‌ಬಿಲ್
(D) ಕೋಗಿಲೆ

21. ಖೇಡಾದ ಪ್ರಸಿದ್ಧ ರೈತ ಆಂದೋಲನ :
(A) 1918
(B) 1919
(C) 1921
(D) 1927

22. "ಪ್ಲಾಸಿ ಕದನವು ಭಾರತದಲ್ಲಿ ಬ್ರಿಟಿಷ್ ಆಳ್ವಿಕೆ ಆರಂಭಗೊಳ್ಳಲು ಕಾರಣವಾದರೆ, ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡವು ಭಾರತದಲ್ಲಿ ಬ್ರಿಟಿಷರ ಆಳ್ವಿಕೆ ಅಂತ್ಯಗೊಳ್ಳಲು ಕಾರಣವಾಯಿತು" ಎಂದು ಹೇಳಿದವರು :
(A) ಜವಾಹರಲಾಲ್ ನೆಹರೂ
(B) ಉಧಾಮ್ ಸಿಂಗ್
(C) ಮೋತಿಲಾಲ್ ನೆಹರೂ
(D) ಗಾಂಧೀಜಿ

23. ಸಾಮಾಜಿಕ ಪಿಡುಗು ಎನಿಸಿಕೊಂಡ "ಸತಿ ಪದ್ಧತಿ"ಯ ಚಿತ್ರವನ್ನು ರಚಿಸಿದವರು :
(A) ರಾಜಾರಾಮ್ ಮೋಹನ್‌ರಾಯ್
(B) ಅಮೃತಾ ಶೇರ್‌ಗಿಲ್
(C) ನಂದಲಾಲ್ ಬೋಸ್
(D) ಅಬನೀಂದ್ರ ನಾಥ್ ಠಾಕೂರ್

24. ಕೇರಳದಲ್ಲಿ ಉಪ್ಪಿನ ಸತ್ಯಾಗ್ರಹ (ದಂಡಿ ಯಾತ್ರೆ)ಗೆ ಮುಂದಾಳುತ್ವ ವಹಿಸಿದವರು :
(A) ಕೆ. ಕೇಳಪ್ಪನ್
(B) ಪಿ. ಕೃಷ್ಣಪಿಳ್ಳೈ
(C) ಎ.ಕೆ. ಗೋಪಾಲನ್
(D) ಎನ್.ವಿ. ಜೋಸೆಫ್

25. "ಭಾರತದ ರಾಷ್ಟ್ರೀಯತೆಯ ಜನಕ" ಎಂದು ಕರೆಸಿಕೊಂಡವರು :

(A) ಗಾಂಧೀಜಿ (B) ಜವಾಹರಲಾಲ್ ನೆಹರೂ

(C) ಸುಭಾಷ್‌ಚಂದ್ರ ಬೋಸ್ (D) ಸುರೇಂದ್ರನಾಥ್ ಬ್ಯಾನರ್ಜಿ

26. ಇಂಡಿಯನ್ ನ್ಯಾಶನಲ್ ಕಾಂಗ್ರೆಸ್‌ನ ಮೊದಲ ಮಹಿಳಾ ಅಧ್ಯಕ್ಷರಾಗಿದ್ದವರು :

(A) ಆ್ಯನಿ ಬೆಸೆಂಟ್ (B) ಸರೋಜಿನಿ ನಾಯ್ಡು

(C) ನೆಲ್ಲಿಸನ್ ಗುಪ್ತಾ (D) ಸೋನಿಯಾ ಗಾಂಧಿ

27. "ರಕ್ತ ಸಾಕ್ಷಿಗಳುಡೆ ರಾಜಕುಮಾರನ್" ಎಂದು ಪ್ರಸಿದ್ಧರಾದ ಸ್ವಾತಂತ್ರ್ಯ ಸೇನಾನಿ :

(A) ಸುಭಾಷ್‌ಚಂದ್ರ ಬೋಸ್ (B) ಲಾಲಾ ಲಜಪತ್ ರಾಯ್

(C) ಭಗತ್ ಸಿಂಗ್ (D) ರಾಜಗುರು

28. "ಪೋಸ್ಟ್ ಆಫೀಸ್" ಎನ್ನುವ ಪುಸ್ತಕದ ರಚನೆಕಾರರು :

(A) ಗೋಪಾಲಕೃಷ್ಣ ಗೋಖಲೆ (B) ನಂದಲಾಲ್ ಬೋಸ್

(C) ಪ್ರೇಮ್‌ಚಂದ್ (D) ರವೀಂದ್ರನಾಥ್ ಠಾಕೂರ್

29. ಭಾರತದ ಮೊದಲ ಸ್ವಾತಂತ್ರ್ಯ ಹೋರಾಟ ನಡೆದ ವರ್ಷ :

(A) 1741 (B) 1747

(C) 1857 (D) 1947

30. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದಾಗ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದವರು :

(A) ಗಾಂಧೀಜಿ (B) ಜೆ.ಬಿ. ಕೃಪಲಾನಿ

(C) ಜವಾಹರಲಾಲ್ ನೆಹರೂ (D) ಸಿ. ರಾಜಗೋಪಾಲಾಚಾರಿ

31. ಭಾರತದ ಯಾವ ರಾಜ್ಯವು "ಗ್ರಾಮೀಣ ಗಣತಂತ್ರಗಳ ಸಮೂಹ" ಎಂದು ಕರೆಯಲ್ಪಡುತ್ತದೆ?

(A) ಮಿಜೋರಾಂ (B) ನಾಗಾಲ್ಯಾಂಡ್

(C) ಪಶ್ಚಿಮ ಬಂಗಾಳ (D) ಜಮ್ಮು–ಕಾಶ್ಮೀರ

32. "ಶಿಕ್ಷಣದ ಹಕ್ಕು" ಕಾನೂನು ಜಾರಿಗೆ ಬಂದದ್ದು :

(A) 2010 (B) 2011

(C) 2012 (D) 2016

33. ನಮ್ಮ ಸಂವಿಧಾನದಲ್ಲಿ ಎಷ್ಟು ಮೂಲಭೂತ ಹಕ್ಕುಗಳಿವೆ?

(A) 8 (B) 10

(C) 11 (D) 13

34. ಭಾರತದ ಮೊದಲ ಪ್ರಭಾರಿ (ಆ್ಯಕ್ಟಿಂಗ್) ರಾಷ್ಟ್ರಪತಿ ಆಗಿದ್ದವರು ಯಾರು?
(A) ವಿ.ವಿ. ಗಿರಿ
(B) ಮೊಹಮ್ಮದ್ ಹಿದಾಯತ್‌ಉಲ್ಲಾ
(C) ಬಿ.ಡಿ. ಜತ್ತಿ
(D) ನೀಲಂ ಸಂಜೀವ ರೆಡ್ಡಿ

35. "ವಂದೇಮಾತರಂ" ಗೀತೆಗೆ ಅನುಮೋದನೆ ಸಿಕ್ಕಿದ್ದು ಯಾವಾಗ?
(A) 1947 ಜುಲೈ 22
(B) 1950 ಜನವರಿ 24
(C) 1947 ಆಗಸ್ಟ್ 15
(D) 1950 ಜನವರಿ 26

36. ಭಾರತದ ರಾಷ್ಟ್ರೀಯ ಕ್ರೀಡೆ ಯಾವುದು?
(A) ಹಾಕಿ
(B) ಕ್ರಿಕೆಟ್
(C) ಫುಟ್‌ಬಾಲ್
(D) ಗಾಲ್ಫ್

37. ಸಂಸತ್ತಿನಲ್ಲಿ ವಿಶ್ವಾಸ ಗೊತ್ತುವಳಿಯನ್ನು ಮಂಡಿಸುವವರು ಯಾರು?
(A) ರಾಷ್ಟ್ರಪತಿ
(B) ವಿರೋಧಪಕ್ಷದ ನಾಯಕ
(C) ಸ್ಪೀಕರ್
(D) ಪ್ರಧಾನಮಂತ್ರಿ

38. "ಮಾಹಿತಿ ಹಕ್ಕುಗಳನ್ನು ದೂರವಾಣಿ ಮೂಲಕ ಪಡೆದುಕೊಳ್ಳುವ ಪದ್ಧತಿ"ಯನ್ನು ಮೊದಲ ಬಾರಿಗೆ ಜಾರಿಗೆ ತಂದ ಭಾರತದ ಪ್ರಥಮ ರಾಜ್ಯ :
(A) ಮಧ್ಯಪ್ರದೇಶ
(B) ಒಡಿಶ್ಶಾ
(C) ಉತ್ತರಪ್ರದೇಶ
(D) ಕೇರಳ

39. ಕೇರಳ ಮಾನವ ಹಕ್ಕುಗಳ ಆಯೋಗದ ಮುಖ್ಯಾಲಯ ಎಲ್ಲಿದೆ?
(A) ಕೊಚ್ಚಿ
(B) ತಿರುವನಂತಪುರಂ
(C) ಕೋಜಿಕ್ಕೋಡು
(D) ತ್ರಿಶೂರ್

40. ಭಾರತದ ಮೊದಲ ಮಹಿಳಾ ರಾಷ್ಟ್ರಪತಿ ಯಾರು?
(A) ಸರೋಜಿನಿ ನಾಯ್ಡು
(B) ಇಂದಿರಾ ಗಾಂಧಿ
(C) ಕ್ಯಾಪ್ಟನ್ ಲಕ್ಷ್ಮೀ
(D) ಪ್ರತಿಭಾ ಪಾಟೀಲ್

41. ಕೇರಳದಲ್ಲಿ ಸಾಧಾರಣವಾಗಿ ಕಾಣಸಿಗುವ ದೃಶ್ಯ :
(A) ಮಲೆನಾಡು
(B) ಎಡನಾಡು
(C) ಸಮುದ್ರ ತೀರ
(D) ಸರೋವರ ಪ್ರದೇಶ

42. ಕೇರಳದ ನೀರು ಸರಬರಾಜು ಇಲಾಖೆಯ ಮುಖ್ಯಾಲಯ ಎಲ್ಲಿದೆ?
(A) ಎರ್ನಾಕುಲಂ
(B) ಆಲೆಪ್ಪಿ
(C) ಕೊಲ್ಲಂ
(D) ಮಂಜೇಶ್ವರ

43. ಪೆಪ್ಪರ ವನ್ಯಮೃಗಧಾಮ ಎಲ್ಲಿದೆ?

(A) ಕಣ್ಣೂರು
(B) ಕೊಲ್ಲಂ
(C) ತಿರುವನಂತಪುರಂ
(D) ಇಡುಕ್ಕಿ

44. ಸೈಲೆಂಟ್ ವ್ಯಾಲಿಯಿಂದ ಯಾವ ನದಿಯು ಹರಿಯುತ್ತದೆ?

(A) ಮಯ್ಯಳಿಪ್ಪುಳ
(B) ಕುಂತಿಪ್ಪುಳ
(C) ಚಂದ್ರಗಿರಿಪ್ಪುಳ
(D) ತೂದಪ್ಪುಳ

45. ಕೇರಳದ ಯಾವ ಸರೋವರವು "ಆಶ್ರಮಂ ಕಾಯಲ್" ಎಂದು ಕರೆಯಲ್ಪಡುತ್ತದೆ?

(A) ಶಾಸ್ತಾಂಕೋಟ ಸರೋವರ
(B) ವೆಂಬನಾಡು ಸರೋವರ
(C) ಅಷ್ಟಮುಡಿ ಸರೋವರ
(D) ಉಪ್ಪಳ ಸರೋವರ

46. ಕೇರಳದ ಯಾವ ಪ್ರದೇಶವು ಅತ್ಯಂತ ಹೆಚ್ಚು ಸಮುದ್ರತೀರವನ್ನು ಹೊಂದಿದೆ?

(A) ಕಣ್ಣೂರು
(B) ಕೊಲ್ಲಂ
(C) ಆಲೆಪ್ಪಿ
(D) ಎರ್ನಾಕುಲಂ

47. ಯಾವ ದೇಶವು ಕೇರಳದ ಕಲ್ಲಿಕೋಟೆಯಲ್ಲಿರುವ ಉರುಮಿ ಹೈಡ್ರೋ ಪವರ್ ಪ್ರಾಜೆಕ್ಟ್‌ನೊಂದಿಗೆ ಸಂಬಂಧವನ್ನು ಹೊಂದಿದೆ?

(A) ಕೆನಡಾ
(B) ನಾರ್ವೆ
(C) ರಷ್ಯಾ
(D) ಚೈನಾ

48. ಕೇರಳದ ಯಾವ ಪ್ರದೇಶವು ಅತ್ಯಂತ ಕಡಿಮೆ ಸಂಖ್ಯೆಯ ರಾಷ್ಟ್ರೀಯ ಹೆದ್ದಾರಿಗಳನ್ನು ಹೊಂದಿದೆ?

(A) ವಯನಾಡು
(B) ತ್ರಿಶೂರ್
(C) ಇಡುಕ್ಕಿ
(D) ಕಾಸರಗೋಡು

49. ಕೇರಳದ ಯಾವ ಜಿಲ್ಲೆಯು ಅತ್ಯಧಿಕ ಸಂಖ್ಯೆಯ ಜನಸಂಖ್ಯೆಯನ್ನು ಹೊಂದಿದೆ?

(A) ತಿರುವನಂತಪುರಂ
(B) ಮಲಪ್ಪುರಂ
(C) ಕಣ್ಣೂರು
(D) ಎರ್ನಾಕುಲಂ

50. ಕೇರಳದ ಯಾವ ಕ್ರೀಡಾಪಟುವನ್ನು "ಪಯ್ಯೊಳಿ ಎಕ್ಸ್‌ಪ್ರೆಸ್" ಎಂದು ಕರೆಯಲಾಗುತ್ತದೆ?

(A) ಎಂ.ಡಿ. ವತ್ಸಮ್ಮ
(B) ಎಸ್. ಶ್ರೀಶಾಂತ್
(C) ಕೆ.ಸಿ. ಎಲ್ಲಮ್ಮ
(D) ಪಿ.ಟಿ. ಉಷಾ

51. "ಮಯ್ಯಳಿ ಗಾಂಧಿ" ಎಂದು ಕರೆಯಲ್ಪಡುವ ಸ್ವಾತಂತ್ರ್ಯ ಹೋರಾಟಗಾರ :

(A) ಎ.ಕೆ. ಗೋಪಾಲನ್
(B) ಎ.ಕೆ. ಕುಮರನ್ ಮಾಸ್ಟರ್
(C) ಎನ್.ವಿ. ಜೋಸೆಫ್
(D) ಕೆ. ಕೇಳಪ್ಪನ್

52. ನಾಯರ್ ಸರ್ವೀಸ್ ಸೊಸೈಟಿಯ ಸಂಸ್ಥಾಪಕರು ಯಾರು?
(A) ಡಾ. ಪಲ್ಪು
(B) ವಿ.ಟಿ. ಭಟ್ಟತ್ತಿರಿಪ್ಪಾಡ್
(C) ಪಿ. ಕೃಷ್ಣಪಿಳ್ಳೈ
(D) ಮನ್ನತ್ತ್ ಪದ್ಮನಾಭನ್

53. ದೇವಾಲಯ ಪ್ರವೇಶ ಘೋಷಣೆಯಾದದ್ದು ಯಾವ ವರ್ಷ?
(A) 1931
(B) 1924
(C) 1946
(D) 1936

54. "ಕುಮಾರನ್ ಆಸಾನ್ ಅವರ ಸ್ಮಾರಕ" ಎಲ್ಲಿದೆ?
(A) ತೋನ್ನೈಕ್ಕಲ್
(B) ಚೇರೈ
(C) ಜಗತಿ
(D) ಚೆಂಬಳಂತ್ತಿ

55. ಅಯ್ಯಂಕಾಳಿ ಅವರನ್ನು "ಪುಳಯರಾಜ" ಎಂದು ಬಣ್ಣಿಸಿದವರು ಯಾರು?
(A) ರವೀಂದ್ರನಾಥ್ ಠಾಕೂರ್
(B) ಗಾಂಧೀಜಿ
(C) ಜವಾಹರಲಾಲ್ ನೆಹರೂ
(D) ಶ್ರೀ ನಾರಾಯಣ ಗುರು

56. ಪ್ರಸಿದ್ಧ "ಮಾರಮಾನ್ ಕನ್ವೆಂಶನ್" ನಡೆದದ್ದು ಯಾವ ತೀರದಲ್ಲಿ?
(A) ಭಾರತಹೊಳೆ
(B) ಪೆರಿಯಾರ್
(C) ಪಂಪಾ
(D) ಕಬಿನಿ

57. "ಚೇರಮಾರ್ ಮಹಾಜನಸಭಾ"ವನ್ನು ರೂಪಿಸಿದವರು :
(A) ಸಹೋದರನ್ ಅಯ್ಯಪ್ಪನ್
(B) ಪೊಯಿಕಯಿಲ್ ಯೋಹಾನನ್
(C) ಪಾಂಬಾಡಿ ಜಾನ್ ಜೋಸೆಫ್
(D) ಆರ್ನೋಸ್ ಪಾದ್ರಿ

58. "ವಾಗನ್ ದುರಂತ"ಕ್ಕೆ ಸಂಭಂಧಿಸಿದ ಕ್ರಾಂತಿ ಯಾವುದು?
(A) ಮಲಬಾರ್ ದಂಗೆ
(B) ನಿವರ್ತನ ಪ್ರತಿಭಟನೆ
(C) ಉಪ್ಪಿನ ಸತ್ಯಾಗ್ರಹ
(D) ಪುನ್ನಪ್ಪರ ವಯಲಾರ್ ಧರಣಿ

59. ಯಾವ ವರ್ಷ "ತಿರುಕೊಚ್ಚಿ" ರಾಜ್ಯವು ಅಸ್ತಿತ್ವಕ್ಕೆ ಬಂತು?
(A) 1946
(B) 1949
(C) 1952
(D) 1956

60. "ಒನ್ನೇಕಾಲ್ ಕೋಡಿ ಮಲೆಯಾಳಿಗಳ್" ಎನ್ನುವ ಪುಸ್ತಕದ ಕರ್ತೃ ಯಾರು?
(A) ಎನ್.ವಿ. ಕೃಷ್ಣವಾರಿಯರ್
(B) ಇ.ಎಂ.ಎಸ್. ನಂಬೂದಿರಿಪ್ಪಾಡ್
(C) ಆ್ಯನಿ ಮ್ಯಾಸ್ಕ್ರೀನ್
(D) ಕೆ. ರಾಮಕೃಷ್ಣ ಪಿಳ್ಳೈ

61. ಸಮಾನ ಸಂಖ್ಯೆಯ ನ್ಯೂಟ್ರಾನ್‌ಗಳ ವಿಭಿನ್ನ ಪದಾರ್ಥಗಳನ್ನು ಹೊಂದಿರುವ ಪರಮಾಣುವನ್ನು ಏನೆಂದು ಕರೆಯುತ್ತಾರೆ?
   (A) ಐಸೋಟೋಪ್ಸ್
   (B) ಐಸೋಟೋನ್ಸ್
   (C) ಐಸೋಬಾರ್ಸ್
   (D) ಮೇಲಿನವುಗಳಲ್ಲಿ ಯಾವುದೂ ಅಲ್ಲ

62. ಪೀರಿಯಡಿಕಲ್ ಟೇಬಲ್‌ನಲ್ಲಿ 4ನೇ ಪೀರಿಯಡ್‌ನಲ್ಲಿರುವ ಪದಾರ್ಥಗಳ ಸಂಖ್ಯೆ :
   (A) 4
   (B) 8
   (C) 18
   (D) 16

63. ಗಡಸು ನೀರಿನಲ್ಲಿರುವ ಹೈಡ್ರೋಜನ್‌ನ ಐಸೋಟೋಪ್ :
   (A) ಡ್ಯುಟೇರಿಯಂ
   (B) ಟ್ರಿಶಿಯಂ
   (C) ಪ್ರೋಟಿಯಂ
   (D) ಇರಿಡಿಯಂ

64. ಸೌರ ಪ್ಯಾನೆಲ್‌ನಲ್ಲಿ ಕೋಶಗಳನ್ನು ಜೋಡಿಸಲು ಬಳಸುವ ಲೋಹ ಯಾವುದು?
   (A) ಕಂಚು
   (B) ಅಲ್ಯೂಮಿನಿಯಂ
   (C) ಪ್ಲಾಟಿನಂ
   (D) ಬೆಳ್ಳಿ

65. ಸೌರವ್ಯೂಹದಲ್ಲಿರುವ ಅತ್ಯಂತ ದೊಡ್ಡ ಉಪಗ್ರಹ :
   (A) ಟೈಟಾನ್
   (B) ಗ್ಯಾನಿಮಿಡ್
   (C) ಡೇಮೋಸ್
   (D) ಫೋಬಸ್

66. ಪಾದರಸದ ಅದಿರು :
   (A) ಸಿನ್ನೆಬಾರ್
   (B) ಗ್ಯಾಲಾನಾ
   (C) ಹೆಮಟೈಟ್
   (D) ಮ್ಯಾಗ್ನಟೈಟ್

67. ಗಾಜಿನಲ್ಲಿ ನೀರು ಅಂಟಿಕೊಳ್ಳುವುದು ಯಾವ ಬಲದಿಂದ?
   (A) ಮೇಲ್ಮೈ ತನ್ಯತೆ
   (B) ಘರ್ಷಣಾ ಬಲ
   (C) ಅದಿಸನ್
   (D) ಕೊಹಿಶನ್

68. ಕೆಂಪು ಬಣ್ಣ ಮತ್ತು ನೀಲಿ ಬಣ್ಣಗಳ ಮಿಶ್ರಣದಿಂದ ರೂಪುಗೊಳ್ಳುವ ಮತ್ತೊಂದು ಬಣ್ಣ :
   (A) ಮಜೆಂತಾ
   (B) ಸಿಯಾನ್
   (C) ಹಳದಿ
   (D) ಆರೆಂಜ್

69. ಶಬ್ದದ ಆವರ್ತನೆಯ ಘಟಕ :
   (A) ಡೆಸಿಬಲ್
   (B) ಹರ್ಟ್ಜ್
   (C) ಮ್ಯಾಕ್‌ನಂಬರ್
   (D) ನ್ಯೂಟನ್

70. $100^{o}$ C ಗೆ ಸಮಾನವಾದ ಫ್ಯಾರನ್‌ಹೀಟ್ ಎಷ್ಟು?

(A) 32 (B) 212

(C) 112 (D) 132

71. ಮಾನವ ಶರೀರದ ಅಸ್ಥಿಪಂಜರದಲ್ಲಿ ಇರುವ ಒಟ್ಟು ಎಲುಬುಗಳ ಸಂಖ್ಯೆ ಎಷ್ಟು?

(A) 120 (B) 206

(C) 80 (D) 200

72. ಹೃದಯವನ್ನು ಆಚ್ಛಾದಿಸುವ ಡಬಲ್ ಮೆಂಬ್ರೇನ್ :

(A) ಪೆರಿಕಾರ್ಡಿಯಂ (B) ಮೆನಿಂಜಾಸ್

(C) ಪ್ಲೂರಾ (D) ಪೆರಿಟೋನಿಯಂ

73. ಪುನರುತ್ಪಾದನಾ ವ್ಯವಸ್ಥೆಯ ಬೆಳವಣಿಗೆಗೆ ಸಂಬಂಧಿಸಿದ ವಿಟಾಮಿನ್ ಯಾವುದು?

(A) ವಿಟಾಮಿನ್ ಎ (B) ವಿಟಾಮಿನ್ ಡಿ

(C) ವಿಟಾಮಿನ್ ಸಿ (D) ವಿಟಾಮಿನ್ ಇ

74. ಸ್ವೇದದಿಂದ (ಬೆವರು) ಸಂಕ್ರಮಿಸುವ ವೈರಸ್ ರೋಗ :

(A) ಚಿಕನ್ ಫಾಕ್ಸ್ (B) ಸಾರ್ಸ್

(C) ಏಡ್ಸ್ (D) ಡೆಂಗು ಜ್ವರ

75. ವೈಜ್ಞಾನಿಕವಾಗಿ ಪೆಪ್ಪರ್ ನೈಗ್ರಾಂ ಎಂದು ಕರೆಯಲ್ಪಡುವ ನಗದು ಬೆಳೆ :

(A) ಕಾಳುಮೆಣಸು (B) ಅಕ್ಕಿ

(C) ಗೋಧಿ (D) ಏಲಕ್ಕಿ

76. ಕೇರಳ ರಾಜ್ಯವು ಜಾರಿಗೊಳಿಸಿದ ಸುಕೃತಂ ಎನ್ನುವ ಪ್ರಾಜೆಕ್ಟ್ ಯಾವ ರೋಗಕ್ಕೆ ಸಂಬಂಧಿಸಿದೆ?

(A) ಡಯಾಬಿಟೀಸ್ (B) ಏಡ್ಸ್

(C) ಕ್ಷಯರೋಗ (ಟ್ಯುಬರ್‌ಕ್ಯುಲೊಸಿಸ್) (D) ಕ್ಯಾನ್ಸರ್

77. ಸೆಂಟ್ರಲ್ ಹಾರ್ಟಿಕಲ್ಚರ್ ರಿಸರ್ಚ್ ಸೆಂಟರ್ ಎಲ್ಲಿದೆ?

(A) ಕಣ್ಣೂರು (B) ಕಾಸರಗೋಡು

(C) ತಿರುವನಂತಪುರಂ (D) ಕೊಲ್ಲಂ

78. ವಿಶ್ವ ಡಯಾಬಿಟಿಕ್ ದಿನ :

(A) ಡಿಸೆಂಬರ್ 1 (B) ನವೆಂಬರ್ 14

(C) ಜೂನ್ 5 (D) ಜುಲೈ 11

79. "ಅಂತರ್ ರಾಷ್ಟ್ರೀಯ ಧಾನ್ಯಗಳ ವರ್ಷ" ಆಚರಿಸಿದ್ದು ಯಾವಾಗ?

(A) 2016 (B) 2014
(C) 2015 (D) 2012

80. ಕೇರಳದಲ್ಲಿರುವ ವನ್ಯಮೃಗಧಾಮ :

(A) ಇರವಿಕ್ಕುಳಂ (B) ಸೈಲೆಂಟ್ ವ್ಯಾಲಿ
(C) ಪೆಪ್ಪಾರ (D) ನೀಲಗಿರಿ

81. $111 \times 112 = 111 + X^2$ ಆದರೆ, $X$ ನ ಮೌಲ್ಯವೇನು?

(A) 112 (B) 113
(C) 111 (D) 100

82. ಮೊದಲ 8 ವಿಷಮ ಸಂಖ್ಯೆಗಳ ಸರಾಸರಿಯನ್ನು ಕಂಡುಹಿಡಿಯಿರಿ :

(A) 8 (B) 16
(C) 24 (D) 15

83. $25 \times 345 - 24 \times 345 =$

(A) 340 (B) 345
(C) 350 (D) 360

84. $\frac{11}{16}, \frac{4}{3}, \frac{5}{9}, \frac{4}{11}$ ಗಳನ್ನು ಇಳಿಕೆ ಕ್ರಮದಲ್ಲಿ ಬರೆದರೆ, 3ನೇ ಭಾಗಾಕಾರ ಯಾವುದಾಗಿರುತ್ತದೆ?

(A) $\frac{11}{16}$ (B) $\frac{4}{11}$
(C) $\frac{5}{9}$ (D) $\frac{4}{3}$

85. $1.8 \times 3.6 \div 0.09$ ನ ಮೌಲ್ಯವೇನು?

(A) 9 (B) 0.9
(C) 7.2 (D) 72

86. ಇವುಗಳಲ್ಲಿ ಗುಂಪಿನಿಂದ ಭಿನ್ನವಾದದ್ದು ಯಾವುದು?

1, 3, 8, 31, 129, 651

(A) 3 (B) 8
(C) 129 (D) 651

87. $9910+100\times100^0$ ಎಂದರೆ ಎಷ್ಟು?

(A) 1000
(B) 10101
(C) 10010
(D) 101010

88. $\sqrt{0.0016}\times\sqrt{0.000025}\times\sqrt{100}=$

(A) 0.02
(B) 0.2
(C) 0.002
(D) 0.0002

89. $2\frac{1}{2}$ ಯ $1\frac{1}{2}$ ಪಟ್ಟು ಎಷ್ಟು?

(A) $1\frac{3}{4}$
(B) $2\frac{3}{4}$
(C) $4\frac{3}{4}$
(D) $3\frac{3}{4}$

90. $1\times2\times3\times\ldots\ldots\times15$ ರ ಉತ್ಪನ್ನದ ಕೊನೆಯ ಅಂಕೆ ಯಾವುದು?

(A) 0
(B) 1
(C) 5
(D) ಮೇಲಿನವುಗಳಲ್ಲಿ ಯಾವುದೂ ಅಲ್ಲ

91. 1250 ರ 50% ದ 40% ಎಂದರೆ ಎಷ್ಟು?

(A) 125
(B) 250
(C) 200
(D) 175

92. $x+\frac{1}{x}=5$ ಆದರೆ, $x^2+\frac{1}{x^2}$ ನ ಮೌಲ್ಯವೆಷ್ಟು?

(A) 10
(B) 25
(C) 23
(D) 20

93. ಒಂದು ಸಂಖ್ಯೆಯ ದ್ವಿಗುಣವು ಆ ಸಂಖ್ಯೆಯ $\frac{1}{2}$ ಕ್ಕಿಂತ 30 ರಷ್ಟು ಅಧಿಕಕ್ಕೆ ಸಮಾನವಾಗಿದ್ದರೆ, ಆ ಸಂಖ್ಯೆಯನ್ನು ಕಂಡುಹಿಡಿಯಿರಿ.

(A) 10
(B) 20
(C) 30
(D) 40

94. 5 ಸೇಬುಹಣ್ಣುಗಳ ಖರೀದಿ ಬೆಲೆಯು 4 ಸೇಬುಹಣ್ಣುಗಳ ಮಾರಾಟಬೆಲೆಗೆ ಸಮಾನವಾಗಿದ್ದರೆ, ಉಂಟಾಗುವ ಶೇಕಡಾ ಲಾಭ ಅಥವಾ ನಷ್ಟ ಎಷ್ಟು?

(A) 10%
(B) 20%
(C) 25%
(D) 30%

95. ನೀವು ನಿಮ್ಮ ಮನೆಯಿಂದ ಉತ್ತರ ದಿಕ್ಕಿಗೆ 5 ಕಿ.ಮೀ. ನಡೆದು 12 ಕಿ.ಮೀ. ಪೂರ್ವ ದಿಕ್ಕಿಗೆ ನಡೆದರೆ ದೇವಾಲಯವನ್ನು ತಲುಪುತ್ತೀರಿ. ಹಾಗಿದ್ದರೆ, ನಿಮ್ಮ ಮನೆ ಹಾಗೂ ದೇವಾಲಯದ ನಡುವಿನ ದೂರ ಎಷ್ಟು?

(A) 13 ಕಿ.ಮೀ. (B) 12 ಕಿ.ಮೀ.
(C) 15 ಕಿ.ಮೀ. (D) 10 ಕಿ.ಮೀ.

96. 400 ಕೆಲಸಗಾರರು ಒಂದು ಕೆಲಸವನ್ನು 75 ದಿನಗಳಲ್ಲಿ ಪೂರೈಸಬಲ್ಲರು. ಅವರಲ್ಲಿ 25 ಕೆಲಸಗಾರರನ್ನು ವಜಾಗೊಳಿಸಿದರೆ, ಆ ಕೆಲಸವನ್ನು ಪೂರೈಸಲು ಎಷ್ಟು ದಿನಗಳು ಬೇಕಾಗುತ್ತವೆ?

(A) 80 (B) 75
(C) 90 (D) 100

97. ಪಾರ್ಕಿಂಗ್ ಸ್ಥಳವೊಂದರಲ್ಲಿ ಕೆಲವು ಆಟೋರಿಕ್ಷಾಗಳನ್ನು ಹಾಗೂ ಕಾರುಗಳನ್ನು ಪಾರ್ಕ್ ಮಾಡಲಾಗಿದೆ. ಪಾರ್ಕ್ ಮಾಡಿರುವ ಒಟ್ಟು ವಾಹನಗಳ ಸಂಖ್ಯೆ 20 ಮತ್ತು ಒಟ್ಟು ಚಕ್ರಗಳ ಸಂಖ್ಯೆ 68. ಹಾಗಿದ್ದರೆ, ಅಲ್ಲಿರುವ ಆಟೋರಿಕ್ಷಾಗಳ ಸಂಖ್ಯೆ ಎಷ್ಟು?

(A) 8 (B) 16
(C) 9 (D) 12

98. ತಂದೆ ಮತ್ತು ಅವನ ಮಗನ ವಯಸ್ಸಿನ ನಡುವಿನ ಅನುಪಾತವು 4 : 2 ಆಗಿದೆ. ಅವರಿಬ್ಬರ ವಯಸ್ಸಿನ ಉತ್ಪನ್ನವು 72 ಆದರೆ, 10 ವರ್ಷಗಳ ನಂತರ ಅವರಿಬ್ಬರ ವಯಸ್ಸಿನ ನಡುವಿನ ಅನುಪಾತ ಎಷ್ಟು?

(A) 10 : 4 (B) 11 : 8
(C) 8 : 4 (D) 8 : 11

99. ಚೌಕವೊಂದರ ಬಾಹುಗಳನ್ನು ಮೂಲ ಅಳತೆಗಿಂತ $\frac{1}{2}$ ದಷ್ಟು ಕಡಿಮೆ ಮಾಡಿದರೆ, ಅದರ ಕ್ಷೇತ್ರಫಲ ಹಾಗೂ ಪರಿಧಿಯಲ್ಲಿ ಉಂಟಾಗುವ ವ್ಯತ್ಯಾಸಗಳೇನು?

(A) ಪರಿಧಿಯ ಅಳತೆ ಅರ್ಧದಷ್ಟಾಗುತ್ತದೆ ಮತ್ತು ಕ್ಷೇತ್ರಫಲವು $\frac{1}{4}$ ರಷ್ಟಾಗುತ್ತದೆ
(B) ಪರಿಧಿ ಹಾಗೂ ಕ್ಷೇತ್ರಫಲಗಳೆರಡೂ $\frac{1}{2}$ ರಷ್ಟಾಗುತ್ತದೆ
(C) ಪರಿಧಿಯು $\frac{1}{4}$ ರಷ್ಟಾಗುತ್ತದೆ ಮತ್ತು ಕ್ಷೇತ್ರಫಲವು $\frac{1}{4}$ ರಷ್ಟಾಗುತ್ತದೆ
(D) ಪರಿಧಿಯು $\frac{1}{4}$ ರಷ್ಟಾಗುತ್ತದೆ ಮತ್ತು ಕ್ಷೇತ್ರಫಲವು $\frac{1}{2}$ ರಷ್ಟಾಗುತ್ತದೆ

100. ಘಂಟೆಗೆ 72 ಕಿ.ಮೀ. ವೇಗದಲ್ಲಿ ಚಲಿಸುತ್ತಿರುವ 300 ಮೀ. ಉದ್ದದ ರೈಲೊಂದು $\frac{1}{2}$ ಕಿ.ಮೀ. ಉದ್ದದ ಸೇತುವೆಯನ್ನು ದಾಟಲು ತೆಗೆದುಕೊಳ್ಳುವ ಸಮಯ ಎಷ್ಟು?

(A) 25 ಸೆಕೆಂಡುಗಳು (B) 20 ಸೆಕೆಂಡುಗಳು
(C) 30 ಸೆಕೆಂಡುಗಳು (D) 40 ಸೆಕೆಂಡುಗಳು

SPACE FOR ROUGH WORK

**SPACE FOR ROUGH WORK**